# ಕಾನೂನು ನೆರವು ಮತ್ತು ನೀವು

## 1 ಕಾನೂನು ನೆರವು ಎಂದರೇನು?

ಕಾನೂನು ನೆರವು ಎಂದರೆ ನ್ಯಾಯಾಲಯ, ನ್ಯಾಯಮಂಡಳಿ ಅಥವಾ ಪ್ರಾಧಿಕಾರದೆದುರು ಇರುವ ಪ್ರಕರಣದಲ್ಲಿ ವಾದಿಸುವ ವಕೀಲರನ್ನು ಗೊತ್ತುಮಾಡಲು ಆರ್ಥಿಕವಾಗಿ ಶಕ್ತರಲ್ಲದ ಎಲ್ಲಾ ಬಡವರು ಮತ್ತು ಅಗತ್ಯವಿರುವವರಿಗೆ ಉಚಿತ ಕಾನೂನು ಸೇವೆಗಳನ್ನು ಒದಗಿಸುವುದು.



## 2 ಕಾರಾಗೃಹದಲ್ಲಿ ಬಂಧಿಯಾಗಿರುವ ವ್ಯಕ್ತಿಯು ಕಾನೂನು ನೆರವು ಪಡೆಯಲು ಹಕ್ಕುಳ್ಳವನಾಗಿರುತ್ತಾನೆಯೇ?

1987ರ ಕಾನೂನು ಸೇವೆಗಳ ಪ್ರಾಧಿಕಾರ ಅಧಿನಿಯಮದ ಕಲಂ 12 (ಜಿ) ಯ ಮೇರೆಗೆ ಕಾರಾಗೃಹದಲ್ಲಿ ಬಂಧಿಯಾಗಿರುವ ಯಾವುದೇ ವ್ಯಕ್ತಿಯು ಉಚಿತ ಕಾನೂನು ನೆರವು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

## 3 ಉಚಿತ ಕಾನೂನು ನೆರವು ಪಡೆಯಲು ನೀವು ಯಾರನ್ನು ಭೇಟಿ ಮಾಡಬೇಕು?

ಉಚಿತ ಕಾನೂನು ನೆರವು ಪಡೆಯಲು ನೀವು:

i) ಆತನನ್ನು/ಆಕೆಯನ್ನು ಯಾವ ದಂಡಾಧಿಕಾರಿಯವರ (ಮ್ಯಾಜಿಸ್ಟ್ರೇಟ್) ಮುಂದೆ ಹಾಜರುಪಡಿಸಲಾಗುವುದೋ ಅವರನ್ನು,
ii) ಬಂಧನದಲ್ಲಿದ್ದರೆ, ಅಭಿರಕ್ಷೆಯ ಪ್ರಾಧಿಕಾರವನ್ನು,
iii) ತಾಲ್ಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರನ್ನಾಗಿ ನಾಮಕರಣ ಮಾಡಲ್ಪಟ್ಟಿರುವ ಹಿರಿಯ ಸಿವಿಲ್ ನ್ಯಾಯಾಧೀಶರನ್ನು,
iv) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರನ್ನು,
v) ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರನ್ನು,
vi) ರಾಜ್ಯ ಮಟ್ಟದಲ್ಲಿ ಉಚ್ಚ ನ್ಯಾಯಾಲಯದ ಕಾನೂನು ಸೇವೆಗಳ ಸಮಿತಿಯ ಕಾರ್ಯದರ್ಶಿಯವರನ್ನು,
vii) ಮೇಲಿನ ಹಂತದಲ್ಲಿ ಸರ್ವೋಚ್ಚ ನ್ಯಾಯಾಲಯದ ಕಾನೂನು ಸೇವೆಗಳ ಸಮಿತಿಯ ಕಾರ್ಯದರ್ಶಿಯವರನ್ನು ಕೋರಿಕೊಳ್ಳಬಹುದಾಗಿದೆ.

## 4 ಕಾನೂನು ನೆರವಿನಡಿ ಲಭ್ಯವಿರುವ ಸೇವೆಗಳು ಯಾವುವು?

i) ನ್ಯಾಯಾಲಯದಲ್ಲಿ ನಿಮ್ಮ ಪ್ರಕರಣದಲ್ಲಿ (ವಿಚಾರಣೆ ಅಥವಾ ಮೇಲ್ಮನವಿ) ನಿಮ್ಮನ್ನು ಪ್ರತಿನಿಧಿಸಲು ವಕೀಲರ ಸೇವೆಗಳು
ii) ನ್ಯಾಯಾಲಯ ಶುಲ್ಕ ಮತ್ತು ಇತರ ಶುಲ್ಕಗಳನ್ನು ಪಾವತಿಸುವುದು.
iii) ಯಾವುದೇ ಕಾನೂನು ವ್ಯವಹರಣೆಯಲ್ಲಿ ವಾದಪತ್ರ/ಪ್ರತಿವಾದ ಪತ್ರ ಇತ್ಯಾದಿಗಳನ್ನು ಸಿದ್ದಪಡಿಸಿ ದಾಖಲಿಸುವುದು.
iv) ವಕೀಲರು ಅಥವಾ ಕಾನೂನು ಸಲಹೆಗಾರರ ಶುಲ್ಕವನ್ನು ಪಾವತಿಸುವುದು.
v) ಯಾವುದೇ ಕಾನೂನು ವ್ಯವಹರಣೆಯಲ್ಲಿ ಡಿಕ್ರಿ/ತೀರ್ಪು/ಆದೇಶದ ಪ್ರತಿ ಅಥವಾ ಇನ್ಯಾವುದೇ ದಸ್ತಾವೇಜನ್ನು ಪಡೆದುಕೊಳ್ಳಲು ತಗಲುವ ವೆಚ್ಚವನ್ನು ಪಾವತಿಸುವುದು.
vi) ಮುದ್ರಣ ವೆಚ್ಚ, ಅನುವಾದ ವೆಚ್ಚ ಇವುಗಳೂ ಸೇರಿದಂತೆ ಕಾಗದ ಪತ್ರಗಳನ್ನು ಸಿದ್ದಪಡಿಸಲು ತಗಲುವ ವೆಚ್ಚ.

## 5 ಕಾನೂನು ನೆರವಿಗಾಗಿ ಅರ್ಜಿ ಸಲ್ಲಿಸುವುದು ಹೇಗೆ?



i) ಮೇಲೆ ಹೇಳಿದ ಸಂಬಂಧಪಟ್ಟ ಪ್ರಾಧಿಕಾರಕ್ಕೆ ನೀವು ಲಿಖಿತ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
ii) ಯಾವುದೇ ವ್ಯಕ್ತಿಗೆ ಓದು ಬರಹ ಬರದಿದ್ದರೆ ಕಾನೂನು ಸೇವೆಗಳ ಪ್ರಾಧಿಕಾರವು ಆತ/ಆಕೆಯ ಹೇಳಿಕೆಯನ್ನು ಆ ವ್ಯಕ್ತಿಯ ಹೆಬ್ಬೆಟ್ಟಿನ ಗುರುತಿನೊಂದಿಗೆ ದಾಖಲಿಸಿಕೊಳ್ಳುತ್ತದೆ. ಆ ಹೇಳಿಕೆಯನ್ನೆ ಅರ್ಜಿ ಎಂದು ಪರಿಗಣಿಸಲಾಗುವುದು.



## 6 ಯಾರು ಕಾನೂನು ನೆರವನ್ನು ಒದಗಿಸುತ್ತಾರೆ?



ಕಾನೂನು ನೆರವನ್ನು ಕಾನೂನು ಸೇವೆಗಳ ಪ್ರಾಧಿಕಾರವು ಒದಗಿಸುತ್ತದೆ. ಅವುಗಳೆಂದರೆ

i) ತಾಲ್ಲೂಕು ಕಾನೂನು ಸೇವೆಗಳ ಸಮಿತಿ.
ii) ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ.
iii) ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ.
iv) ಉಚ್ಚ ನ್ಯಾಯಾಲಯ ಕಾನೂನು ಸೇವೆಗಳ ಸಮಿತಿ.
v) ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ.
vi) ಸರ್ವೋಚ್ಚ ನ್ಯಾಯಾಲಯ ಕಾನೂನು ಸೇವೆಗಳ ಸಮಿತಿ.

## 7 ಕಾನೂನು ನೆರವನ್ನು ಪಡೆದುಕೊಂಡ ವ್ಯಕ್ತಿಯ ಕರ್ತವ್ಯಗಳೇನು?

i) ಕಾನೂನು ಸೇವೆಗಳ ಪ್ರಾಧಿಕಾರವು ನೀಡಿದ ನಿರ್ದೇಶನಗಳನ್ನು ಅನುಸರಿಸುವುದು.
ii) ನಿಮ್ಮ ವಕೀಲರಿಗೆ ಪೂರ್ಣ ಸತ್ಯವನ್ನು ಹೇಳುವುದು.
iii) ನಿಮ್ಮ ವಕೀಲರಿಗೆ ಯಾವುದೇ ಶುಲ್ಕ ಅಥವಾ ವೆಚ್ಚವನ್ನು ಕೊಡದಿರುವುದು.
iv) ಎಲ್ಲಿ ಸಾಧ್ಯವೋ ಅಲ್ಲಿ ಸಮಿತಿಯ ಕಛೇರಿಗೆ, ನ್ಯಾಯಾಲಯ ಅಥವಾ ನೇಮಕ ಮಾಡಲ್ಪಟ್ಟ ವಕೀಲರ ಬಳಿಗೆ ಹೋಗಿಬರಲು ಕುಟುಂಬದ ಸಧಸ್ಯರೊಬ್ಬರನ್ನು ಕಳುಹಿಸುವುದು.

## 8 ಕಾನೂನು ನೆರವನ್ನು ಕೊಡಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳಲು ಪೊಲೀಸರು/ನ್ಯಾಯಾಲಯವು ನಿರ್ವಹಿಸಬೇಕಾದ ಕರ್ತವ್ಯಗಳೇನು?

i) ವಕೀಲರೊಬ್ಬರನ್ನು ತಮ್ಮ ಪರವಾಗಿರಲು ನೇಮಕ ಮಾಡಲು ಇರುವ ಸಂವಿಧಾನ್ಮಿಕ ಹಕ್ಕಿನ ಬಗ್ಗೆ ಆರೋಪಿಗೆ ತಿಳಿಸಬೇಕಾದುದು ಪೊಲೀಸರ ಕರ್ತವ್ಯ.
ii) ಆರೋಪಿಯ ಪರ ವಕೀಲರು ಇರುವರೆ ಎಂಬುದನ್ನು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಮಯದಲ್ಲಿ/ಸುನಾವಣೆಯ ಸಮಯದಲ್ಲಿ ವಿಚಾರಿಸಬೇಕಾದುದು ನ್ಯಾಯಾಲಯದ ಕರ್ತವ್ಯವಾಗಿದ್ದು, ಆರೋಪಿಯು ವಕೀಲರೊಬ್ಬರಿಂದ ಪ್ರತಿನಿಧಿಸಲ್ಪಡದಿದ್ದರೆ ಸರ್ಕಾರದ ವೆಚ್ಚದಲ್ಲಿ ತಕ್ಷಣವೇ ವಕೀಲರೊಬ್ಬರನ್ನು ಗೊತ್ತುಮಾಡುವುದು.


ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
'ನ್ಯಾಯ ದೇಗುಲ', ಮೊದಲನೇ ಮಹಡಿ, ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು–560027.
ದೂರವಾಣಿ ಸಂಖ್ಯೆ: 080–22111729, 22111875, 22111716, 22111714
ಇ–ಮೇಲ್ ವಿಳಾಸ: mskar-slsa@hck.gov.in
ವೆಬ್‌ಸೈಟ್ ವಿಳಾಸ: www.kslsa.kar.nic.in ಟೋಲ್ ಫ್ರೀ ಸಂಖ್ಯೆ: 1800–425–90900

Commonwealth Human Rights Initiative
3rd floor, 55A, Siddhartha Chambers, Kalu Sarai
New Delhi - 110 016
Tel: +91-11-4318 0200
Fax: +91 11 4318 0217
Email: info@humanrightsinitiative.org
Website: www.humanrightsinitiative.org